ಕೂಲಿ ಮಾಡುವ ತಂದೆ ತಾಯಿಯ ಜೊತೆಗೆ ತಾನೂ ಕೈ ಜೋಡಿಸಿ ಅಡುಗೆ ಮನೆಯಲ್ಲಿ ಒಲೆ ಹತ್ತುವಂತೆ ನೋಡಿಕೊಂಡಿದ್ದ ಕೊರಟಗೆರೆಯ ಶಿಲ್ಪಕಲಾ ದ್ವಿತೀಯ ಪಿಯು ಪರೀಕ್ಷೆಯ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಮೊದಲನೆಯ ಸ್ಥಾನ ಗಳಿಸಿದ್ದು 'ಟ್ಯೂಷನ್ ಇಲ್ಲದೆ ಪರೀಕ್ಷೆ ಎದುರಿಸುವುದು ಹೇಗೆ?' ಎಂದು ಅಳುಕುವವರಿಗೆ ಒಂದು ಪಾಠ. ಟ್ಯೂಷನ್ ಪಡೆಯದೆಯೇ ಅತ್ಯುತ್ತಮ ಸಾಧನೆ ಮಾಡಿದ ಗ್ರಾಮೀಣ ಪ್ರದೇಶಗಳ ಪ್ರತಿಭಾವಂತರ ಸಂಖ್ಯೆಯೂ ಕಡಿಮೆ ಅಲ್ಲ.



# ಅಚ್ಚರಿ ಮೂಡಿಸಿದ ಫಲಿತಾಂಶ

ಈ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯು ಪರೀಕ್ಷೆಗಳ ಫಲಿತಾಂಶ ಕೆಲವು ಅಚ್ಚರಿಯ ಸಂಗತಿಗಳನ್ನು ಬಯಲಿಗಿರಿಸಿದೆ. (ಈ ಎರಡು ಪ್ರಮುಖ ಪರೀಕ್ಷೆಗಳಲ್ಲಿ ಬಾಲಕಿಯರು ಹಲವು ವರ್ಷಗಳಿಂದ ಮೇಲುಗೈ ಸಾಧಿಸುತ್ತಿದ್ದಾರೆ. ಆದರೆ, ಅದು ಮಹಿಳೆಯರ ಸಬಲೀಕರಣಕ್ಕೆ ನಿದರ್ಶನವೇನೂ ಅಲ್ಲ.) ಸರ್ಕಾರಿ ಶಾಲೆಗಳು ಮತ್ತು ಅನುದಾನಿತ ಶಾಲೆಗಳು ಉತ್ತಮ ಪ್ರಗತಿಯನ್ನು ದಾಖಲಿಸಿವೆ. ಕೆಲವು ಅನುದಾನರಹಿತ ಖಾಸಗಿ ಶಾಲೆಗಳಲ್ಲಿಯೂ ದ್ವಿತೀಯ ಪಿಯು ಫಲಿತಾಂಶದಲ್ಲಿ 'ಶೂನ್ಯ ಸಂಪಾದನೆ'ಯಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಯಶಸ್ಸಿನ ಪ್ರಮಾಣ, ನಗರ ಪ್ರದೇಶಗಳ ವಿದ್ಯಾರ್ಥಿಗಳ ಉತ್ತೀರ್ಣತೆಯ ಪ್ರಮಾಣಕ್ಕಿಂತ ಹೆಚ್ಚಾಗಿದೆ. ಈ ಪ್ರಗತಿ ಕಳೆದ ವರ್ಷವೂ ವ್ಯಕ್ತವಾಗಿತ್ತು. 'ಸರ್ಕಾರಿ ಶಾಲೆಗಳೆಂದರೆ ಅಲ್ಲಿ ಶೈಕ್ಷಣಿಕ ಪ್ರಗತಿಗೆ, ಉನ್ನತ ದರ್ಜೆಯನ್ನು ಪಡೆಯುವುದಕ್ಕೆ ಅವಕಾಶವೇ ಇಲ್ಲವೆಂಬುದು ತಪ್ಪು ಕಲ್ಪನೆ' ಎಂದು ಈ ಸಲದ ಫಲಿತಾಂಶ ಮನವರಿಕೆ ಮಾಡಿಕೊಟ್ಟಿದೆ.

ವಿದ್ಯಾರ್ಥಿಗಳ ಮುಂದಿನ ಭವಿಷ್ಯವನ್ನು ನಿರ್ಧರಿಸುವುದರಲ್ಲಿ ಎಸ್‌ಎಸ್‌ಎಲ್‌ಸಿ ಪ್ರಮುಖ ಹಂತ. ವೃತ್ತಿ ಶಿಕ್ಷಣದ ಅವಕಾಶಗಳನ್ನು ನಿರ್ಧರಿಸುವುದರಲ್ಲಿ ಪಿಯು ಪರೀಕ್ಷೆಯ ಫಲಿತಾಂಶ ಮಹತ್ವದ ಪಾತ್ರ ವಹಿಸುತ್ತದೆ. ಹದಿಹರೆಯದ ಅತ್ಯಂತ ಸೂಕ್ಷ್ಮ ಅವಸ್ಥೆಯಲ್ಲಿ ತಮ್ಮ ಬೌದ್ಧಿಕ ಸಾಮರ್ಥ್ಯವನ್ನು ಒರೆಗೆ ಹಚ್ಚುವಂಥ ಕಠಿಣ ಕಸರತ್ತಿನಲ್ಲಿ ವಿದ್ಯಾರ್ಥಿಯನ್ನು ತೊಡಗಿಸುವ ಹೊಣೆ ಹೆತ್ತವರದು, ಶಿಕ್ಷಕರದು. ಇದು ವಿದ್ಯಾರ್ಥಿಯ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗಳು ಪ್ರಭಾವ ಬೀರುವಂತಹ ಅವಸ್ಥೆ ಕೂಡ. ಶಾಲೆಯ ಹಿತಕರ ಪರಿಸರ, ಶಿಕ್ಷಕರ ಆಪ್ತ ಸಾಂಗತ್ಯ, ಮಿತ್ರರ ಒತ್ತಾಸೆಗಳ ಜೊತೆಗೆ ಹೆತ್ತವರ ಸ್ನೇಹಪರ ವರ್ತನೆ ವಿದ್ಯಾರ್ಥಿಗಳ ಮನಸ್ಸನ್ನು ಪರೀಕ್ಷೆಯಲ್ಲಿ ಕೇಂದ್ರೀಕರಿಸುವಂತೆ ಮಾಡಬಲ್ಲದು. ಹದಿಹರೆಯದ ಅಪರಿಮಿತ ಉತ್ಸಾಹವನ್ನು ಪರೀಕ್ಷಾ ಯಶಸ್ಸಿಗೆ ದುಡಿಸಿಕೊಳ್ಳುವಂತೆ ಪ್ರೇರೇಪಿಸಬಲ್ಲದು. ಒಂದು ಇಲ್ಲವೆ ಎರಡು ಮಕ್ಕಳಿಗೆ ಕುಟುಂಬವನ್ನು ನಿಯಂತ್ರಿಸಿಕೊಂಡು, ಅವರ ಭವಿಷ್ಯದ ಬಗ್ಗೆ ನಿಶ್ಚಿತ ಕಲ್ಪನೆ ಇಟ್ಟುಕೊಂಡ ಪೋಷಕರು ಮಕ್ಕಳ ಈ ಹಂತದ ಓದಿನಲ್ಲಿ ತೋರುವ ಆಸಕ್ತಿ ಸಕಾರಾತ್ಮಕವಾಗಿದ್ದರೆ ಅದರ ಪರಿಣಾಮ ಫಲಿತಾಂಶದಲ್ಲಿ ಗೋಚರವಾಗುತ್ತದೆ. ಮಕ್ಕಳ ಕಲಿಕೆಯ ಸಾಮರ್ಥ್ಯದ ಅರಿವಿಲ್ಲದೆ, ಅವರ ವಯಸ್ಸಿನ ಅವಸ್ಥೆಯ ಒತ್ತಡಗಳ ಪರಿವೆ ಇಲ್ಲದೆ, ತಮ್ಮ ಆಣತಿಯಂತೆಯೇ ಎಲ್ಲವೂ ನಡೆಯಬೇಕೆನ್ನುವ ಹೆತ್ತವರ ಒತ್ತಡ ವಿಪರೀತ ಪರಿಣಾಮಕ್ಕೆ ಕಾರಣವಾಗುತ್ತದೆ. ಯಾವುದೇ ಬಗೆಯ ಒತ್ತಡ ಹಾಕುವುದು ಕಲಿಕೆಯ ಸೂಕ್ಷ್ಮ ಹಂತದಲ್ಲಿ ಪ್ರಯೋಜನಕಾರಿಯಲ್ಲ, ಬದಲಾಗಿ ಅದು ಮಕ್ಕಳ ಮೇಲೆ ಕೆಟ್ಟ ಪರಿಣಾಮವನ್ನೇ ಬೀರುತ್ತದೆ ಎಂಬುದನ್ನು ಹೆತ್ತವರು ಅರ್ಥ ಮಾಡಿಕೊಳ್ಳಬೇಕು.

ಪರೀಕ್ಷೆಯಲ್ಲಿ ಯಶಸ್ಸು ಪಡೆಯುವುದಕ್ಕೆ ಟ್ಯೂಷನ್ ಅನಿವಾರ್ಯ ಎಂಬ ಸ್ಥಿತಿ ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೆ, ಗ್ರಾಮೀಣ ಭಾಗದಲ್ಲಿಯೂ ಹಬ್ಬಿದೆ. ಪಿಯು ನಂತರದ ಶೈಕ್ಷಣಿಕ ಅವಕಾಶಗಳಿಗಾಗಿ ನಡೆಯುವ ಹಲವು ಪ್ರವೇಶ ಪರೀಕ್ಷೆಗಳ ಸಿದ್ಧತೆಗೆ ಟ್ಯೂಷನ್ ಅತ್ಯವಶ್ಯಕ ಎಂಬ ಅಲಿಖಿತ ನಿಯಮ ಜಾರಿಯಲ್ಲಿದೆ. ಈ ನಂಬಿಕೆಗಳು ಸುಳ್ಳು ಎಂಬುದನ್ನು ಅತ್ಯಂತ ದುರ್ಬಲ ಆರ್ಥಿಕ ಹಿನ್ನೆಲೆಯ ವಿದ್ಯಾರ್ಥಿನಿಯರು, ಬಾಲಕರು ಈ ಸಲದ ಫಲಿತಾಂಶದಲ್ಲಿ ತೋರಿಸಿದ್ದಾರೆ. ಕೂಲಿ ಮಾಡುವ ತಂದೆ ತಾಯಿಯ ಜೊತೆಗೆ ತಾನೂ ಕೈ ಜೋಡಿಸಿ ಅಡುಗೆ ಮನೆಯಲ್ಲಿ ಒಲೆ ಹತ್ತುವಂತೆ ನೋಡಿಕೊಂಡಿದ್ದ ಕೊರಟಗೆರೆಯ ಶಿಲ್ಪಕಲಾ ದ್ವಿತೀಯ ಪಿಯು ಪರೀಕ್ಷೆಯ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಮೊದಲನೆಯ ಸ್ಥಾನ ಗಳಿಸಿದ್ದು 'ಟ್ಯೂಷನ್ ಇಲ್ಲದೆ ಪರೀಕ್ಷೆ ಎದುರಿಸುವುದು ಹೇಗೆ?' ಎಂದು ಅಳುಕುವವರಿಗೆ ಒಂದು ಪಾಠ. ಟ್ಯೂಷನ್ ಪಡೆಯದೆಯೇ ಅತ್ಯುತ್ತಮ ಸಾಧನೆ ಮಾಡಿದ ಗ್ರಾಮೀಣ ಪ್ರದೇಶಗಳ ಪ್ರತಿಭಾವಂತರ ಸಂಖ್ಯೆಯೂ ಕಡಿಮೆ ಅಲ್ಲ.

ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಅವಶ್ಯಕವಾಗಿದ್ದರೂ ಒಮ್ಮೆ ಯಶಸ್ಸು ಪಡೆಯದಿದ್ದರೆ ಅದೇ ಶಿಕ್ಷಣದ ಕೊನೆಯೆಂದು ಭಾವಿಸಬಾರದು. ಅದನ್ನೇ ಬದುಕಿನ ಕೊನೆ ಎಂದು ಭಾವಿಸಿ ಅತಿರೇಕದ ಕ್ರಮಕ್ಕೆ ಮುಂದಾಗುವುದು ಸರಿಯಲ್ಲ. ಅದು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸಲಾಗದ ಶಿಕ್ಷಣ ಪದ್ಧತಿಯ ದೋಷ. ತಮ್ಮದಲ್ಲದ ತಪ್ಪಿಗೆ ಶಿಕ್ಷೆ ವಿಧಿಸಿಕೊಳ್ಳುವಂಥ ದುಸ್ಸಾಹಸಕ್ಕೆ ಅನುತ್ತೀರ್ಣರಾದ ವಿದ್ಯಾರ್ಥಿಗಳು ಮುಂದಾಗಬಾರದು. ಇದನ್ನು ಹೆತ್ತವರೂ ಅರ್ಥ ಮಾಡಿಕೊಳ್ಳಬೇಕು.

■ ಲಕ್ಷ್ಮಣ ಕೊಡಸೆ